ದಿನಾಂಕಃ **20.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ

ಮದುವೆ ವೇಳೆ ನನ್ನ ಮಗ ಮತ್ತು ಸೊಸೆ ಓದುತ್ತಿದ್ದರು. ಅರ್ಜಿದಾರರು ಮೈಸೂರಿನಲ್ಲಿ L. L. B. ಓದುತ್ತಿದ್ದರು. ಅವರು ಓದು ಮುಗಿದಿರಲಿಲ್ಲ. ಮದುವೆ ಆದ ಮೇಲೆ ಓದನ್ನು ಮುಂದುವರೆಸಲಿಲ್ಲ. ಸೊಸೆ ಗರ್ಭಿಣಿಯಾದಳು ಅವರೇ ಓದಲಿಲ್ಲ. L. L. B. ಕೊನೆ semester ಆಕೆ ಓದುತ್ತಿದ್ದಳು. ಕೊನೆ semester ನಾನು ಓದಲು ಬಿಡಲಿಲ್ಲ ಎಂದರೆ ಸರಿಯಲ್ಲ. ನಾನು ಬಲವಂತ ಪಡಿಸಿ ಓದುವುದು ಗೊತ್ತಿದ್ದರೂ, ಮದುವೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ವಿದ್ಯಾಭ್ಯಾಸ ಮಾಡಲು ನಾನು ಬಿಡದೆ ಮದುವೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಆಕೆಯೇ ಓದಲಿಲ್ಲ, ಆದ್ದರಿಂದ ಮುಗಿಸಿರುವುದಿಲ್ಲ. ಓದು ಮುಂದುವರೆಸಿದರೆ ಮನೆಯಿಂದ ಆಚೆ ಹಾಕುತ್ತೇನೆ ಎಂದು ಹೇಳಿದೆವು ಎಂದರೆ ಸರಿಯಲ್ಲ. ಮದುವೆ ಆದಾಗ ನನ್ನ ಗಂಡ ಮತ್ತು ನನ್ನ ಮಗ ಮತ್ತೂರು ಗ್ರಾಮದ ಮನೆಯಲ್ಲಿ ಜೊತೆಯಲ್ಲಿದ್ದರು.

2010 ರಲ್ಲಿ ನನ್ನ ಗಂಡ ತೀರಿಕೊಂಡರು. ನನ್ನ ಮಗ ಸುಮಾರು ಬಾರಿ ಗಲಾಟೆ ಮಾಡಿ ಆಕೆಯನ್ನು ಸಿಗರೇಟ್ ನಿಂದ ಸುಟ್ಟಿದ್ದಾನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಆಕೆಯ ಮನೆಯವರು ಬಂದು ಹೇಳಿದರು ಎಂದರೆ ಸರಿಯಲ್ಲ. ನನ್ನ ಮಗನ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದಾವೆ ಆದರೆ ಅದು ಸುಳ್ಳು. 2013 ರಲ್ಲಿ ನನ್ನ ಮಗ ತೀರಿಕೊಂಡ. ನನ್ನ ಗಂಡ ಮತ್ತು ಮಗ ತೀರಿಕೊಂಡ ನಂತರ ಅವರುಗಳ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಳ್ಳಲು ಅರ್ಜಿ ಕೊಟ್ಟಿದ್ದೇನೆ ಎಂದರೆ ನನ್ನ ಗಂಡನ ಆಸ್ತಿಗಳ ಮೇಲೆ ಅಂತಹ ಅರ್ಜಿ ಕೊಟ್ಟಿದ್ದೇನೆ. ಬಿ. ಶೆಟ್ಟಿಗೇರಿಯಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿರುತ್ತೇನೆ, ಅವು ನನ್ನ ಗಂಡನದ್ದು. ಪೊನ್ನಂಪೇಟೆಯಲ್ಲಿರುವ ಮನೆ ನನ್ನದು, ನನ್ನ ಮಗಳಿಗೆ ಕೊಟ್ಟಿದ್ದೇನೆ. ನಾನು ಅರ್ಜಿದಾರಳನ್ನು ಒಡೆದು ಭಯಪಡಿಸಿ ನನ್ನ ಮಗಳಿಗೆ

ಈ ಆಸ್ತಿಯನ್ನು ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ಈ ರೀತಿ ಆಸ್ತಿಗಳನ್ನು ಪರಬಾರೆ ಮಾಡಿರುವುದರಿಂದ ಅದನ್ನು ತಡೆಯಲು ಬಂದಾಗ ಅರ್ಜಿದಾರಳನ್ನು ನಾವು ಹಿಂಸಿಸಿದ್ದೇವೆ ಎಂದರೆ ಸರಿಯಲ್ಲ.

ಕೋತೂರು ಗ್ರಾಮದಲ್ಲಿ ನನ್ನ ಹೆಸರು ಮತ್ತು ಮಗನ ಹೆಸರಿನಲ್ಲಿ 15 ಎಕರೆ ಖರೀದಸಿದ್ದೇವೆ ಎಂದರೆ ಸರಿಯಲ್ಲ. ಈ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಳ್ಳಲು ಅರ್ಜಿ ಕೊಟ್ಟಿದ್ದೇನೆ ಎಂದರೆ ಕೇವಲ ನನ್ನ ಆಸ್ತಿಗಳಿಗೆ ಮಾತ್ರ ಅರ್ಜಿ ಕೊಟ್ಟಿದ್ದೇನೆ. ಎಲ್ಲ ಆಸ್ತಿಗಳ ಮೇಲೆ ಅರ್ಜಿ ಕೊಟ್ಟಿದ್ದು ಅದಕ್ಕೆ ತಕರಾರು ಸಲ್ಲಿಸಿದ ಕಾರಣಕ್ಕೆ ಆ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳು ಮನೆಯಲ್ಲಿದ್ದಾಗ ಆಕೆಗೆ ಖರ್ಚಿಗೆ ಯಾವುದೇ ಹಣ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಅಕೆಯನ್ನು ತವರು ಮನೆಗೆ ಹೋಗಲು ಬಿಡುತ್ತಿರಲಿಲ್ಲ ಮತ್ತು ಕುಟುಂಬದ ಕಾರ್ಯಕ್ರಮಗಳಿಗೆ ಹೋಗಲು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೊಮ್ಮಗಳ ವಿದ್ಯಾಬ್ಯಾಸವನ್ನು ಕಾಲ್ಸ್ ಶಾಲೆಯಲ್ಲಿ ಕೊಡುತ್ತಿದ್ದೇನೆ.

2018 ರಿಂದ ಅರ್ಜಿದಾರಳು ಮತ್ತು ಮೊಮ್ಮಗಳು ಬೇರೆ ಇದ್ದಾರೆ ಎಂದರೆ ಸರಿ. ನಾನು 2018 ರಲ್ಲಿ ಈ ಅರ್ಜಿ ಕೊಟ್ಟರು ತಿಂಗಳ ರೂ. 25,000/- ಅವರ ಖರ್ಚಿಗೆ ಕೊಡುತ್ತಿದ್ದೇನೆ. ಅವರ ಖರ್ಚಿಗೆ ಮಾತ್ರ ರೂ 25,000/- ಕೊಡುತ್ತಿದ್ದೇನೆ ಅದರಲ್ಲಿ ವಿದ್ಯಾಬ್ಯಾಸದ ಖರ್ಚು ಸೇರುತ್ತದೆ. ನನ್ನ ಮೊಮ್ಮಗ ನನ್ನ ಜೊತೆಯಲ್ಲಿದ್ದಾನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ನನ್ನ ಮೊಮ್ಮಗನನ್ನು ತಾಯಿ ಹತ್ತಿರ ಕಳುಹಿಸುತ್ತಿಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಮೊಮ್ಮಗನನ್ನು ತಾಯಿ ನೋಡಲು ಬಿಡಬೇಕಾಗುತ್ತದೆ ಎಂದು ಆದೇಶ ಆಗಿದೆ ಎಂದು ನಾನು ಅಡ್ಡಿಪಡಿಸಿಲ್ಲ. ಆದೇಶವಾದ ನಂತರ ಆಕೆಯು ಮನಗೆ ಬಂದಿಲ್ಲ, ಆದ್ದರಿಂದ ಅವಮಾನ ಮಾಡಿದ್ದೇನೆ ಎಂದು ಹೇಳುವುದು ಸುಳ್ಳು. ಮೊಮ್ಮಗ ತಾಯಿಯನ್ನು ಬೇಟಿ ಮಾಡಲು ಕೇಳಿದರು ನಾನು ಬಿಡುತ್ತಿಲ್ಲ ಎಂದರೆ ಸರಿಯಲ್ಲ, ಆತ ದ್ವಿತೀಯ

ಪಿ. ಯು. ಸಿ. ಓದುತ್ತಿದ್ದೇನೆ. ನನ್ನ ಮಗನಿಗೆ ಎಲ್ಲ ಸೇರಿದ ಆಸ್ತಿಗಳು ನನ್ನ ಸ್ವಾಧೀನದಲ್ಲಿದೆ. ನನಗೆ ಸ್ವಂತ ಫ್ಯಾಕ್ಟರಿ ಇತ್ತು, ಈಗ ಇಲ್ಲ.

ಮತ್ತೂರಿನಲ್ಲಿ 8 ಎಕರೆ ಇದ್ದು, ಅದರಲ್ಲಿ 5 ಎಕರೆ ನನ್ನದು, 3 ಎಕರೆ ನನ್ನ ಗಂಡನದ್ದು. ಬಿ.ಶೆಟ್ಟಿಗೇರಿಯಲ್ಲಿ 3 ವರೆ ಎಕರೆ ಇದ್ದು ನನ್ನ ಹೆಸರಿನಲ್ಲಿದ್ದು, ಈಗ ನನ್ನ ಮಗಳ ಹೆಸರಿನಲ್ಲಿರುತ್ತದೆ. ಮತ್ತೂರಿನಲ್ಲಿ ಒಂದು ಮನೆ ಇದೆ. ಪೊನ್ನಂಪೇಟೆಯಲ್ಲಿ ನನ್ನ ಹೆಸರಿನಲ್ಲಿ ನಿವೇಶನ ಇದೆ. ಬಿ.ಶೆಟ್ಟಿಗೇರಿಯ ಆಸ್ತಿಗಳಲ್ಲಿ ನಾನು ಯಾವುದು ಮಾರಾಟ ಮಾಡಿಲ್ಲ, ಒಟ್ಟು ಕುಟುಂಬದವರು ಮಾರಾಟ ಮಾಡಿದ್ದು, ನನಗೆ ಒಂದು ಭಾಗ ಬಂದಿರುತ್ತದೆ. ಈ ಆಸ್ತಿಗಳಿಂದ ನನ್ನ ಒಟ್ಟು ಆದಾಯ ಎಷ್ಟು ಎಂದು ನನಗೆ ಗೊತ್ತಿಲ್ಲ. 300 ರಿಂದ 400 ಚೀಲ ಕಾಫಿ ಸಿಗುತ್ತದೆ. ಮೆಣಸು ಮತ್ತು ಅಡಿಕೆ ಇಲ್ಲ. ಕಾಫಿ ಕ್ವಿಂಟಾಲ್‌ಗೆ ಸುಮಾರು ರೂ. 10,000/- ಇರಬಹುದು. ಅರ್ಜಿದಾರಳಿಗೆ ನಾನು ಜೀವನಾಂಶ ಸರಿಯಾಗಿ ಕೊಡದೇ ಇದ್ದ ಕಾರಣಕ್ಕೆ ಇನ್ನೊಂದು ಅರ್ಜಿ ಹಾಕಿದ್ದಾರೆ ಎಂದರೆ ಸರಿ. ಅರ್ಜಿದಾರಳಿಗೆ ಸರಿಯಾಗಿ ಜೀವನಾಂಶ ಕೊಡುತ್ತಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರಳ ಮದುವೆ ಸಮಯ ಅವರ ತಂದೆ ತಾಯಿ ಆಭರಣಗಳನ್ನು ಕೊಟ್ಟಿದ್ದರು. ಈ ಆಭರಣಗಳು ನನ್ನ ವಶದಲ್ಲಿದೆ ಎಂದರೆ ಸರಿಯಲ್ಲ. ನನಗೆ ಅರ್ಜಿದಾರಳಿಗೆ ತಿಂಗಳ ಜೀವನಾಂಶ ಕೊಡಲು ಕಷ್ಟವಾಗುತ್ತಿದೆ, ಅವರ ಪಾಲಿನ ಆಸ್ತಿ ತೆಗೆದುಕೊಂಡು ಜೀವನ ಮಾಡಲು ನನಗೆ ಅಭ್ಯಂತರ ಇಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.